# <u>ದಿನಾಂಕ: 17-02-2016 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು</u>

*****

**<u>ಹಾಜರಿದ್ದವರು:</u>**

1. ಶ್ರೀ. ಕೆ.ಎಸ್. ಸತ್ಯಮೂರ್ತಿ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ.
2. ಶ್ರೀ. ಕೆ.ಆನಂದ., ನಿರ್ದೇಶಕರು, ಪ್ರಾಥಮಿಕ ಶಿಕ್ಷಣ. ಆಯುಕ್ತರ ಕಚೇರಿ.
3. ಶ್ರೀ. ಎಚ್.ವಿ. ಕೆಂಪರಾಜು., ಉಪನಿರ್ದೇಶಕರು, ಪ್ರಾಥಮಿಕ ಶಿಕ್ಷಣ.
4. ಶ್ರೀ ಹೆಚ್.ಬಿ.ಮಂಜುನಾಥ್, ಉಪನಿರ್ದೇಶಕರು(ಆಡಳಿತ), ಬೆಂಗಳೂರು ಉತ್ತರ ಜಿಲ್ಲೆ.
5. ಶ್ರೀಮತಿ ಪದ್ಮಾವತಿ, ಉಪನಿರ್ದೇಶಕರು(ಆಡಳಿತ), ಬೆಂಗಳೂರು ದಕ್ಷಿಣ ಜಿಲ್ಲೆ.
6. ಶ್ರೀ ಗೋವಿಂದೇಗೌಡ, ಉಪನಿರ್ದೇಶಕರು(ಆಡಳಿತ) ಬೆಂಗಳೂರು ಗ್ರಾಮಾಂತರ ಜಿಲ್ಲೆ.
7. ಶ್ರೀ ಮಾದೇಗೌಡ, ಡಯಟ್ ಪ್ರಾಂಶುಪಾಲರು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
8. ಶ್ರೀಮತಿ ಗಾಯತ್ರಿ ದೇವಿ, ಡಯಟ್ ಪ್ರಾಂಶುಪಾಲರು, ಬೆಂಗಳೂರು ಉತ್ತರ ಜಿಲ್ಲೆ.
9. ಶ್ರೀಮತಿ ಆರ್. ಮಂಜುಳ, ಹಿರಿಯ ಸಹಾಯಕ ನಿರ್ದೇಶಕರು, ಸಂಸ್ಕೃತ ವಿಭಾಗ.
10. ಶ್ರೀ ರಾಘವೇಂದ್ರ ಸ್ವಾಮಿ, ಆರ್.ಟಿ.ಇ ನೋಡಲ್ ಅಧಿಕಾರಿಗಳು, ಬೆಂಗಳೂರು ದಕ್ಷಿಣ ಜಿಲ್ಲೆ.
11. ಶ್ರೀ ಜಯಸಿಂಹ, ಆರ್.ಟಿ.ಇ ನೋಡಲ್ ಅಧಿಕಾರಿಗಳು, ಬೆಂಗಳೂರು ಉತ್ತರ ಜಿಲ್ಲೆ.

2016-17ನೇ ಸಾಲಿನ ಆರ್.ಟಿ.ಇ ಪ್ರವೇಶ ಪ್ರಕ್ರಿಯೆ ಕುರಿತು ಸಹಾಯವಾಣಿ ಕೇಂದ್ರಗಳ ನಿರ್ವಹಿಸಬೇಕಾದ ಕ್ರಮಗಳ ಬಗ್ಗೆ **ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ** ಮತ್ತು **ಬೆಂಗಳೂರು ಗ್ರಾಮಾಂತರ** ಜಿಲ್ಲೆಗಳ ಉಪನಿರ್ದೇಶಕರು ಮತ್ತು ಬೆಂಗಳೂರು ದಕ್ಷಿಣ ಮತ್ತು ಗ್ರಾಮಾಂತರ ಡಯಟ್ ಪ್ರಾಂಶುಪಾಲರ ಸಭೆ ಕರೆಯಲಾಯಿತು. ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಯಿತು.

1. ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಯಾವುದೇ ಶಾಲೆ ಇಲ್ಲದಿರುವ ಬಗ್ಗೆ ಮಾಹಿತಿಯನ್ನು ಕ್ರಮಬದ್ಧವಾಗಿ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು ಸರಿಯಾಗಿ ನೀಡಿಲ್ಲ. ಮಾಹಿತಿಯನ್ನು ಸರಿಪಡಿಸಿ ಅಪ್‌ಡೇಟ್ ಮಾಡಲು ಸೂಚಿಸಲಾಗಿದೆ.
2. ಅಲ್ಪಸಂಖ್ಯಾತ ಪ್ರಮಾಣ ಪತ್ರವನ್ನು NATIONAL COMMISSION FOR MINORITY EDUCATION INSTITUTIONS (NCMEI) ಇವರಿಂದ ಪಡೆದಿರುವ ಪ್ರಮಾಣ ಪತ್ರದ ನೈಜತೆಯನ್ನು ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷೆಗಳ ನಿರ್ದೇಶನಾಲಯ, ಬೆಂಗಳೂರು ಇವರಿಂದ ಪರಿಶೀಲಿಸಲು ಸೂಚಿಸಲಾಯಿತು.
3. ಅಲ್ಪಸಂಖ್ಯಾತ ಪ್ರಮಾಣ ಪತ್ರವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು(ಆಡಳಿತ) ಇವರುಗಳು ದೃಢೀಕರಿಸದೇ ಸದರಿ ಪ್ರಮಾಣ ಪತ್ರವನ್ನು ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷೆಗಳ ನಿರ್ದೇಶನಾಲಯ, ಬೆಂಗಳೂರು ಇವರಿಂದ ದೃಢೀಕರಿಸಿಕೊಳ್ಳಲು ಸೂಚಿಸಲಾಯಿತು.
4. ಬೆಂಗಳೂರು ಉತ್ತರ ಜಿಲ್ಲೆ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳಲ್ಲಿ ಆರ್.ಟಿ.ಇ ಆನ್‌ಲೈನ್ ಅರ್ಜಿ ಸಲ್ಲಿಸಲು ಕೆಳಕಂಡ ಸಹಾಯ ಕೇಂದ್ರಗಳನ್ನು ಪ್ರಾರಂಭಿಸಲು ಸೂಚಿಸಲಾಗಿದೆ.